೪) ಒಬ್ಬ ಸದಸ್ಯರು ಯೋಜನೆಯನ್ನು ತೆಗೆದುಕೊಳ್ಳಬಹುದು ಎಂದೂ, ಆದರೆ ಎಫ್.ಆರ್.ಎಲ್.ನ್ನು ೧೫೦ ಅಡಿಗೆ ಇಳಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

೫) ಇಬ್ಬರು ಸದಸ್ಯರು ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂದೂ ಆದರೆ ಎಫ್.ಆರ್.ಎಲ್.ನ್ನು ಕೇಂದ್ರ ವಿದ್ಯುತ್ ಪ್ರಾಧಿಕಾರದವರು ಒಪ್ಪಿರುವ ೧೫೭೦ ಅಡಿ ಎಫ್.ಆರ್.ಎಲ್.ಗೆ ಬದಲಾಗಿ ೧೫೪೦ ಅಡಿ ಇಡಬೇಕೆಂದೂ, ಇದರಿಂದ ಸುಮಾರು ಶೇ. ೫೦ರಷ್ಟು ಅರಣ್ಯ ಭೂಮಿಗಳ ಮುಳುಗಡೆ ಕಡಿಮೆಯಾಗುವುದು ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಅಬ್ದುಲ್ ಸಜೀರ್‌ಸಾಬ್ (ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ಪಕ್ಷ ಮಂತ್ರಿಯವರು). —ನನ್ನ ಹೆಸರಿನ ಮುಂದಿರುವ ''೧೯೫೩ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯಿತಿಗಳು ಹಾಗೂ ನ್ಯಾಯ ಪಂಚಾಯಿತಿಗಳ ಶಾಸನದ ೩೧೯ನೇ ಕಲಮಿನ ಮೇರೆಗೆ—೧೯೫೬ನೇ ಇಸವಿಯ ಕರ್ನಾಟಕ ಮಂಡಲ ಪಂಚಾಯಿತಿಗಳ (ಕಟ್ಟಡಗಳ ನಿರ್ಮಾಣದ ಮೇಲೆ ನಿಯಂತ್ರಣ) ಅಧಿನಿಯಮದ ಬಗ್ಗೆ ದಿನಾಂಕ ೨೭ನೇ ಸಪ್ಟೆಂಬರ್, ೧೯೫೬ರಂದು ಆರ್‌ಡಿಪಿ ೩೬ಳಿ ವಿಎಸ್ ೫೬ನೇ ಕ್ರಮಾಂಕ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.''

ಅಧ್ಯಕ್ಷರು. —ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ಕಾರ್ಮಿಕ) ಮಂತ್ರಿಯವರು. ನನ್ನ ಹೆಸರಿನ ಮುಂದಿರುವ ''೧೯೫೭ನೇ ಇಸವಿಯ ಸಪ್ಲಿಮೆಂಟ್ ಶಾಸನದ ೯ನೇ ಕಲಮಿನ ಮೇರೆಗೆ-ಬೆಂಗಳೂರು ಆಫೀವೃದ್ಧಿ ಪ್ರಾಧಿಕಾರದವರು ಐ.ಸಿ.ಎಸ್.ಐ.ಎಂ. ನವರಿಗೆ ಮಾಡಿಕೊಡಲಿರುವ ಮಾರಾಟ ಪತ್ರಕ್ಕೆ ಸಂಬಂಧಿಸಿದಂತೆ ಶುಲ್ಕ ವಿನಾಯಿತಿಯ ಸಂಬಂಧದಲ್ಲಿ ದಿನಾಂಕ ೨೩ನೇ ಡಿಸೆಂಬರ್, ೧೯೫೭ರಂದು ಆರ್‌ಡಿ ೧೮೧ ಇಎಸ್‌ಆರ್ ೫೭ನೇ ಕ್ರಮಾಂಕದಲ್ಲಿ ಹೊರಡಿಸಿದ ಒಪ್ಪೋಲೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.''

ಅಧ್ಯಕ್ಷರು. —ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಜೆ.ಹೆಚ್. ಪಟೀಲ್ (ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಯವರು). —ನನ್ನ ಹೆಸರಿನ ಮುಂದಿರುವ ''೧೯೫೯ನೇ ಇಸವಿಯ ಕರ್ನಾಟಕ ರೇಷ್ಮೆ ಹುಳುಗಳ ಬೀಜ ಪೊಟ್ಟಣ ಹಾಗೂ ರೇಷ್ಮೆದಾರ (ಉತ್ಪಾದನೆಯ ನಿಯಂತ್ರಣ, ಸರಬರಾಜು, ವಿತರಣೆ ಹಾಗೂ ವ್ಯಾಪಾರ) ಶಾಸನದ ೧೩ (೩)ನೇ ಕಲಮಿನ ಮೇರೆಗೆ ಹೊರಡಿಸಲಾದ ೧೯೫೬ನೇ ಇಸವಿ ಕರ್ನಾಟಕ ರೇಷ್ಮೆ ಹುಳುಗಳ ಪೊಟ್ಟಣ ಹಾಗೂ ರೇಷ್ಮೆದಾರ (ಉತ್ಪಾದನೆಯ ನಿಯಂತ್ರಣ ಸರಬರಾಜು, ವಿತರಣೆ ಹಾಗೂ ವ್ಯಾಪಾರ) (ತಿದ್ದುಪಡಿ) ನಿಯಮಾವಳಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ''

ಅಧ್ಯಕ್ಷರು. —ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಯವರು). —ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಪರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅ) ೧೯೬೬ನೇ ಇಸವಿಯ ಕರ್ನಾಟಕ ಶಿಕ್ಷಣ ಪರೀಕ್ಷಾ ಮಂಡಳಿಯ ಶಾಸನದ ೨೫ (೩)ನೇ ಕಲಮಿನ ಮೇರೆಗೆ-೧೯೫೫-೫೬ನೇ ಸಾಲಿನ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವಾರ್ಷಿಕ ವರದಿ;

ಆ) ೧೯೬೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೪೨ನೇ ಕಲಮಿನ (೩)ನೇ ಉಪ-ಕಲಮಿನ ಮೇರೆಗೆ.—

೧) ಮಾಧ್ಯಗಳು ವಿಶ್ವವಿದ್ಯಾನಿಲಯದ ೧೯೫೦-೫೧ನೇ ಸಾಲಿನಿಂದ ೧೯೫೫-೫೬ನೇ ಸಾಲಿನ ವರೆಗೆ ವಾರ್ಷಿಕ ಲೆಕ್ಕ ತನಿಖೆಯ ವರದಿಗಳು ಮತ್ತು ಲೆಕ್ಕ ಪತ್ರಗಳು;

೨) ಮೈಸೂರು ವಿಶ್ವವಿದ್ಯಾನಿಲಯದ ೧೯೫೬-೫೭ನೇ ಸಾಲಿನ ಲೆಕ್ಕಪತ್ರಗಳ ತನಿಖಾ ವರದಿ.

೩) ಧಾರವಾಡ ವಿಶ್ವವಿದ್ಯಾನಿಲಯದ ೧೯೭೫-೭೬, ೧೯೭೬-೭೭ ಹಾಗೂ ೧೯೭೭-೭೮ನೇ ಸಾಲುಗಳ ವಾರ್ಷಿಕ ಲೆಕ್ಕಪತ್ರಗಳ ತನಿಖಾ ವರದಿಗಳು; ಹಾಗೂ

೪) ಮಂಗಳೂರು ವಿಶ್ವವಿದ್ಯಾನಿಲಯದ ೧೯೮೨-೮೩ನೇ ಸಾಲಿನ ವಾರ್ಷಿಕ ವರದಿ.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಹಕ್ಕುಚ್ಯುತಿ ನಿರ್ಣಯ ಸೂಚನೆಗೆ ಅನುಮತಿ ಕೋರಿಕೆ

ಶಿವಮೊಗ್ಗದ ಬುಧೀಖಾನೆ ಸಿಬ್ಬಂದಿಗೆ ಕಿರುಕುಳ ಕೊಟ್ಟು ಅವರನ್ನು ಬಂಧಿಸಿದ್ದರಿಂದ ಸಂಬಂಧಪಟ್ಟ ಸಬ್ ಇನ್ಸ್‌ಪೆಕ್ಟರ್ಸ್‌ನ್ನು ಅಮಾನತ್ತಿನಲ್ಲಿಡುವ ಬಗ್ಗೆ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೨೯-೨-೮೭ ರಂದು ಶಿವಮೊಗ್ಗ ಜೈಲಿನ ಅಧಿಕಾರಿಗಳನ್ನು ಅಲ್ಲಿರುವ ಪೋಲೀಸ್ ಅಧಿಕಾರಿಗಳು, ಅಕ್ರಮವಾಗಿ ಬಂಧಿಸಿ, ಹಿಂಸಿಸಿದ್ದರ ಬಗ್ಗೆ ನಾನೊಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ. ಅದಕ್ಕೆ ಮಾನ್ಯ ಗೃಹಸಚಿವರು ಉತ್ತರವನ್ನು ಕೊಟ್ಟರು.

ಉತ್ತರವನ್ನು ಕೊಡುವಾಗ ಅವರು ಹೇಳಿದರು, ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಇಬ್ಬರು ಎಸ್. ಐ. ಅವರನ್ನು ಸಸ್ಪೆಂಡ್ ಮಾಡಿದ್ದೇನೆ ಮತ್ತು ಎಸ್. ಪಿ. ಬಗ್ಗೆ ಕೂಡ ವಿಚಾರಣೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೇನೆ ಎಂದು ಅವರು ಹೇಳಿದರು. ಆಗ ನಾನು ಕೇಳಿದೆ, ನನಗೆ ಗೊತ್ತಿದ್ದ ಮಟ್ಟಿಗೆ ಯಾರನ್ನೂ ಸಸ್ಪೆಂಡ್ ಮಾಡಲಿಲ್ಲ, ಯಾವ ತಾರೀಖಿಗೆ ಸಸ್ಪೆಂಡ್ ಮಾಡಿದ್ದೀರಿ, ಯಾರ್ಯಾರನ್ನು ಸಸ್ಪೆಂಡ್ ಮಾಡಿದ್ದೀರಿ ಎಂದು ಕೇಳಿದೆ. ಆಗ ಅವರು ಹೇಳಿದರು ಇಬ್ಬರು ಎಸ್.ಐ. ಗಳನ್ನು ಸಸ್ಪೆಂಡ್ ಮಾಡಿದ್ದೇನೆ. ಒಬ್ಬರು ಗಂಗಾಧರಯ್ಯ, ಇನ್ನೊಬ್ಬರು ಆಂಬಿಗೇರ್ ಸಸ್ಪೆನ್‌ಷನ್ ಆಜ್ಞೆ ಇನ್ನೂ ಅವರಿಗೆ ತಲುಪಿಲ್ಲ ಎಂದು ಅವರು ಹೇಳಿದರು. ಇನ್ನೂ ಅವರಿಗೆ ತಲುಪಿಲ್ಲ ಎಂದರೆ ಏನು ಸ್ವಾಮಿ ಸಮಾಚಾರ, ನಾಲ್ಕನೇ ತಾರೀಖು ಆದರೂ ಅವರನ್ನು ಸಸ್ಪೆಂಡ್ ಮಾಡಿಲ್ಲ ಎಂದು ಆಗದರೆ ನಿಮ್ಮ ಇಲಾಖೆಗೆ ಏನು ಮರ್ಯಾದೆ ಬರುತ್ತದೆ ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು, ಒಂದು ಫೈಲಗಳ ಕಾಲ ಫೈಲ್ ಅವರ ಹತ್ತಿರ ಇತ್ತು, ನನ್ನ ಹತ್ತಿರ ಚರ್ಚೆ ಮಾಡಬೇಕೆಂದು ಇಟ್ಟು ಕೊಂಡಿದ್ದರು, ನಾನು ಮೊನ್ನೆ ದಿವಸ ತರಿಸಿಕೊಂಡು ಅದನ್ನು ಓದಿ ಬಿಟ್ಟು ತೀರ್ಮಾನ ತೆಗೆದು ಕೊಂಡಿದ್ದೇನೆ, ಎಂದು ಹೇಳಿದರು. ಇನ್ನೂ ನನಗೆ ನೆನಪಿದ್ದ ಮಟ್ಟಿಗೆ, ನಿನ್ನೆಯ ದಿವಸ ಸಸ್ಪೆನಶನ್ ಆರ್ಡರ್ ಹೋಗಿದೆ ಎಂದು ಹೇಳಿದರು. ನಾನು ಪದೇ ಪದೇ ಹೇಳಿದೆ, ಹೋಗಿಲ್ಲ, ಆಗಿಲ್ಲ ಎಂದು. ಇದಾದ ನಂತರ ಈಗ ಏನಾಯಿತು ಅಂದರೆ, ಆಲ್ಲಿಯ ಸಂಬಂಧಪಟ್ಟ ಡಿ.ಐ.ಜಿ. ಯವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಅದು ಫೆಬ್ರುವರಿ ಐದನೇಯ ತಾರೀಖಿನ ದಿವಸ. ಆದರಲ್ಲಿ " ಶಿವಮೊಗ್ಗದ ಜೈಲಿನ ಅಧಿಕಾರಿಗಳನ್ನು ವಿನಾಕಾರಣ ಬಂಧನದಲ್ಲಿಟ್ಟ ಆರೋಪದ ಮೇಲೆ ಇಬ್ಬರು ಪೋಲೀಸ್ ಎಸ್. ಐ. ಗಳನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಗೃಹ ಸಚಿವ ಬಿ. ರಾಚಯ್ಯನವರು ವಿಧಾನಸಭೆಯಲ್ಲಿ ತಿಳಿಸಿದುದಕ್ಕೆ ಸಂಬಂಧಪಟ್ಟಂತೆ ತಮಗೆ ಇಲ್ಲಿಯವರೆಗೆ ಯಾವುದೇ ಮಾಹಿತಿ ಬರಿದಿಲ್ಲ " ಎಂದು ಅವರು ಹೇಳಿದರು. ಈ ಘಟನೆಗೆ ಸಂಬಂಧಪಟ್ಟಂತೆ ಡಿ.ಐ.ಜಿ. ಯವರಿಂದ ವಿಚಾರಣೆ ನಡೆಸಲಾಗುತ್ತಿದೆ ಎಂದು ಸಚಿವರು ಹೇಳಿದ ಹಿನ್ನೆಲೆಯಲ್ಲಿ ವಿಚಾರಣೆ ನಡೆಸುವಂತೆ ತಮಗೆ ಇಲ್ಲಿಯವರೆಗೆ ಯಾವುದೇ ಆದೇಶ ಬಂದಿಲ್ಲ ಎಂದು ಡಿ.ಐ.ಜಿ. ಯವರು ಖಿನೇ ತಾರೀಖಿನಂದು ಹೇಳಿದರು. ಅವರು ಏನನ್ನೂ ಹೇಳದೆ ಸುಮ್ಮನೆ ಇರಬಹುದಾಗಿತ್ತು. ಅಥವಾ ವಿಧಾನಸಭೆಯಲ್ಲಿ ಮಂತ್ರಿಗಳು ಹೇಳಿದ್ದಾರೆ, ಅದಕ್ಕಿಂತ ಹೆಚ್ಚಿಗೆ ಏನೂ ಹೇಳಲಾರೆ ಎಂದು ಹೇಳಬಹುದಾಗಿತ್ತು. ಇವನ್ನು ನೋಡಿದರೆ, ನಿಮ್ಮ ಆಧಿಕಾರವೇ ಈ ಇಲಾಖೆಯಲ್ಲಿ ನಡೆಯುತ್ತಾ ಇಲ್ಲ ಎನ್ನುವ ಭಾವನೆ ಬರುವ ರೀತಿಯಲ್ಲಿ ಅವರು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಾಗ ನಾನು ಅದಕೋಸ್ಕರವಾಗಿ ಒಂದು ಹಕ್ಕುಭಾಧ್ಯತ ಪ್ರಶ್ನೆಯನ್ನು ಎತ್ತ ಬೇಕೆಂದು ಈ ಸೂಚನೆಯನ್ನು ನಾನು ಕೊಟ್ಟಿದ್ದೇನೆ. ಇವತ್ತು ಆ ಕಡತದ ಪರಿಶೀಲನೆ ಮಾಡಿದರೆ

೧೨-೦೦ ಪಿ. ಎಂ.

ಗೊತ್ತಾಗುತ್ತದೆ. ೨ನೇ ತಾರೀಖು ಸಚಿವರು ಆಜ್ಞೆ ಮಾಡಿರಬಹುದು, ಆ ಆಜ್ಞೆ ನಿಮ್ಮ ಇಲಾಖೆ ಯಿಂದ ೪ನೇ ತಾರೀಖು ಹೊರಟದೆಯೇ ಹೊರತು ನೀವು ಈ ಸದನದಲ್ಲಿ ಹೇಳಿದ ರೀತಿ ಘಾರನೇ ದಿವಸವೇ ಆಗಲಿಲ್ಲ. ೨ನೇ ತಾರೀಖಿಗೆ ಖುಂಚಿತವಾಗಿ ಯಾವ ಸಸ್ಪೆನ್‌ಷನ್ನೂ ಆಗಿರಲಿಲ್ಲ. ಅಂದರೆ ತಮಗೆ ಇಲಾಖೆಯನ್ನು ರಕ್ಷಣೆ ಮಾಡುವ ದೃಷ್ಟಿಯಲ್ಲಿ ಈ ಸಭೆಗೆ ತಪ್ಪು ತಿಳಿವಳಿಕೆ ಕೊಟ್ಟಿದ್ದಾರೆ. ನನಗೆ